ಇದರಿಂದ ಪತ್ರಿಕಾ ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೆ ಚ್ಯುತಿ ತಂದಂತಾಗಿದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಅನುಕೂಲ ಮಾಡುವ ಹಾಗಿದ್ದರೆ, ಈಗಲಾದರೂ ಸುತ್ತೋಲೆ ಹೊರಡಿಸಿ, ಪತ್ರಿಕಾಕರ್ತರಿಗೂ ಎಲ್ಲಾ ಜಿಲ್ಲಾಭಿವೃದ್ಧಿ ಸಮಿತಿಗಳಲ್ಲಿ ಪ್ರವೇಶ ನೀಡುವಂತೆ, ಬರವಣಿಗೆ ಮೂಲಕ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸುವ ಹಾಗೆ ಮಾಡುತ್ತೀರಾ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್, ರಾಜ್, ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದಹಾಗೆ ಯಾವ ಸುತ್ತೋಲೆಯನ್ನೂ ಸರ್ಕಾರ ಕಳುಹಿಸಿಲ್ಲ. ಆದರೆ ಜಿಲ್ಲಾಭಿವೃದ್ಧಿ ಸಮಿತಿ ಸಭೆಗಳಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿರುತ್ತಾರೆ. ಕಾನೂನು ಚೌಕಟ್ಟಿನಲ್ಲಿ, ಸೆಕ್ಷನ್ ೧೧ರ ಪ್ರಕಾರ, ಅವರು ಪತ್ರಿಕಾಕರ್ತರಿಂ ಎಂದಲ್ಲ, ಯಾವುದೇ ಸಾರ್ವಜನಿಕ ವ್ಯಕ್ತಿಯನ್ನು ಸಭೆಯಿಂದ ನಿರ್ಗಮನ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಧಾರವಾಡ ಜಿಲ್ಲೆಯಲ್ಲಿ ಅಥವಾ ಬೇರೆ ಜಿಲ್ಲೆಯಲ್ಲಿ ನಿರ್ಬಂಧ ಮಾಡಿದ್ದಾರೆಂದಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಅವರನ್ನು ಕರೆಯುವುದಕ್ಕೆ ನಮ್ಮದು ಆಭ್ಯಂತರ ಇಲ್ಲ ವೆಂಬುದನ್ನು, ಸದನದಲ್ಲಿ ಮಂತ್ರಿಗಳೂ ಒಪ್ಪುತ್ತಾರೆ.

ಅಧ್ಯಕ್ಷರು.—ಈಗ ನಿಮ್ಮದು ತಕರಾರು ಇಲ್ಲ ಎಂದರೆ, ಡಿ,ಸಿ. ಅವರಿಗೆ ತಿಳಿಸಿಬಿಡಿ.

ಶ್ರೀ ಬಿ. ಆರ್. ಯಾವಗಲ್.—ಇದಕ್ಕೆ ಯಾವ ನಿರ್ಬಂಧ ಇಲ್ಲ, ಸರ್ಕಾರದಿಂದ ಸುತ್ತೋಲೆ ಇಲ್ಲ. ಅವರನ್ನು ಕರೆಯುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಕರೆಯಬಹುದು.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ಕರೆಯುವುದಲ್ಲ, ಅವರ ಪ್ರವೇಶಕ್ಕೆ ಅಡ್ಡಿ ಇಲ್ಲ ಎಂದು ಹೇಳಿಬಿಡಿ.

ಶ್ರೀ ಬಿ. ಆರ್. ಯಾವಗಲ್.—ಅವರನ್ನು ಕರೆಯುವ ಪರಿಸ್ಥಿತಿ ಅಲ್ಲ. ತಾವು ಅತ್ಯವಶ್ಯವಾಗಿ ಕರೆಯಿರಿ ಎಂದು ಹೇಳಿದರೆ, ಸರ್ಕಾರದ ಪರವಾಗಿ ನಾನು ಹೇಳುತ್ತೇನೆ.

ಕೊರಟಗೆರೆ ತಾಲ್ಲೂಕಿನ ದುದ್ದೇನಹಳ್ಳಿಯಲ್ಲಿರುವ ಶ್ರೀ ಮಾರಿಕಾಂಬ ಪ್ರಾಥಮಿಕ ಶಾಲೆಯಲ್ಲಿ ಹಣ ದುರುಪಯೋಗವಾಗುವ ಬಗ್ಗೆ

೧೯೧೧. ಶ್ರೀ ಜಿ. ಎಸ್. ಶಿವನಂಜಪ್ಪ (ಗಂಬ್ಬಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಶ್ರೀಮಾರಿಕಾಂಬ ಪ್ರಾಥಮಿಕ ಶಾಲೆ ದುದ್ದೇನಹಳ್ಳಿ ಕೊರಟಗೆರೆ ತಾಲ್ಲೂಕು, ಇದು ಪರಿಶಿಷ್ಟ ಜಾತಿ ಮತ್ತು ವರ್ಗದ ಆಡಳಿತ ಮಂಡಳಿಯಿಂದ ನಡೆಯುತ್ತಿರುವುದು ನಿಜವೇ?

ಆ) ಈ ಶಾಲೆಯು ಸಿಬ್ಬಂದಿಯವರು ಶಾಲೆಯು ಪ್ರಾರಂಭದಿಂದಲೇ ವೇತನ ಪಡೆಯುತ್ತಿರುವುದು ನಿಜವೇ?

ಇ) ಶೇಕಡ ೫೦ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಇರಬೇಕೆಂಬುದು ನಿಜವೇ?

ಈ) ಶೇಕಡ ೫೦ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಇಲ್ಲದಿದ್ದರೂ ಸಿಬ್ಬಂದಿ ವರ್ಗದವರಿಗೆ ನಿಯಮ ವಿರುದ್ಧವಾಗಿ ವೇತನವನ್ನು ಕ್ರಮವಾಗಿ ನೀಡುತ್ತಿರುವುದು ನಿಜವಲ್ಲವೇ?

ಉ) ಪ್ರಭಾರಿ ಮುಖ್ಯೋಪಾಧ್ಯಾಯರ ಮೇಲೆ ತೀವ್ರತರವಾದ ತಪ್ಪುಗಳು, ಅಕ್ರಮ ಮತ್ತು ನ್ಯಾಯಬಾಹಿರ ವ್ಯವಹಾರ ಮತ್ತು ಹಣ ದುರುಪಯೋಗದ ಬಗ್ಗೆ ಆಪಾದನೆಗಳಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರವು ಕೈಗೊಂಡ ಕ್ರಮ ಏನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶಿಕ್ಷಣ ರಾಜ್ಯ ಸಚಿವರು).—

ಅ) ನಿಜ.

ಆ) ನಿಜ.

ಇ) ನಿಜ.

ಈ) ನಿಜವಲ್ಲ.

ಉ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, (ಈ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಅಂತ ಹೇಳಿದ್ದಾರೆ. ಆಲ್ಲಿ ಸುಮಾರು ೧೦–೧೫ ಸಂಖ್ಯೆಗಿಂತ ಕಡಿಮೆ ಇದೆ. ಇದರ ಬಗ್ಗೆ ನಾನು ಆಲ್ಲಿನ ಅಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದೇನೆ. ಮತ್ತು ಉತ್ತರವನ್ನೂ ಬರೆದಿದ್ದೇವೆ. ಆದರೂ ಇದು ನಿಜವಲ್ಲ ಅಂತ ಹೇಳಿದ್ದಾರೆ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ಕೊಟ್ಟಿರುವ ಉತ್ತರ ಸರಿಯಲ್ಲ. ನಿವ್ಯಾ ಇಲಾಖೆಯಿಂದ ಇದಕ್ಕೆ ಸರಿಯಾದ ಉತ್ತರ ಬಂದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿದೇಗೌಡ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಹಾಸ್ಟಲ್‌ಗಳಲ್ಲಿ ೧೦೦ಕ್ಕೆ ೫೦ಕ್ಕಿಂತ ಜಾಸ್ತಿ ಇರಬೇಕೆ ಏನಾ: ಕಡಿಮೆ ಇರಕೂಡದು. ಆಲ್ಲಿ ೫೦ಕ್ಕಿಂತ ಜಾಸ್ತಿ ಇದ್ದರೆ ಅಥವಾ ಏನಾದರೂ ಒಂದು ವೇಳೆ ಆದರಲ್ಲಿ ವ್ಯತ್ಯಾಸ ಇದ್ದರೆ ಅದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನು ಅಂತ ತಿಳಿಸಿದರೆ, ನಾನು ತಿಳಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆಲ್ಲಿ ವಿದ್ಯಾರ್ಥಿನಿಲಯಗಳಲ್ಲೂ ಮತ್ತು ಸ್ಕೂಲ್‌ನಲ್ಲೂ ಕಡಿಮೆ ಇದೆ. ನೀವು ಅದಕ್ಕೆ ನಿಜವಲ್ಲ ಅಂತ ಉತ್ತರ ಕೊಟ್ಟಿದ್ದೀರಿ. ದಯವಿಟ್ಟು ಅದನ್ನು ತರಿಸಿ ನೋಡಿ. ಆಮೇಲೆ (ಉ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ ಅಂತ ಹೇಳಿದ್ದೀರಿ. ಆಲ್ಲಿ ಇನ್‌ಛಾರ್ಜ್ ಹೆಡ್‌ಮಾಸ್ಟರ್ ರವರು ಏನು ಇದ್ದಾರೆ ಅವರು ೨೬–೧–೮೬ರಂದು ರಿಪಬ್ಲಿಕ್ ಡೇ ಅನ್ನು ಆ ಸ್ಕೂಲ್‌ನಲ್ಲಿ ಮಾಡಬೇಕಾಗಿತ್ತು, ಆದರೆ ಅವರು ಆ ಕಾರ್ಯವನ್ನು ಮಾಡಲಿಲ್ಲ. ಆದರ ಬಗ್ಗೆ ನಾನಂ ಅಧಿಕಾರಿಗಳಿಗೆ, ಮುಖ್ಯಮಂತ್ರಿಗಳಿಗೆ ಮತ್ತು ವಿದ್ಯಾ ಮಂತ್ರಿಗಳಿಗೆ ದಿನಾಂಕ ೨೮–೧–೮೬ ರಂದು ಕಂಪ್ಲೆಂಟ್ ಕೊಟ್ಟಿದ್ದರೂ, ಇದಕ್ಕೆ ತಾವು ಕೊಡುವಾಗ ಅದಂ ಸರ್ಕಾರದ ಗಮನಕ್ಕೆ ಬಂದಿಲ್ಲ ಅಂತ ಹೇಳಿದ್ದೀರಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಈಗ ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Qualified candidates Linguistic Minorities in the examination for Professional.

1505. SRI R. ROHAN BAIG (Shivajinagar).—Will the Minister for Education be pleased to state ?

1) The number of qualified candidates (Linguistic Minorities) in the entrance examination for Professional and Technical courses viz. Polytechnic, B, E. Medical, Dental for the past two years ?

2) The number of candidates applied for such courses and the number actually admitted in each course, with details regarding Muslim and other Backward and Linguistic Minorities ?

3) Whether the Government is aware that in the absence of any specific orders that after selection of the candidates under the cateogry of Kashab, Phularies, Nadaf, Chapperband, Schikalgar Dervesu etc. have been rejected without admission and verification although they have produced certificates from the competent authorities as prescribed by Government ?